# ಕೋ ಎಂದರೆ ಕೊಡಚಾದ್ರಿ

ಸುಡುವ ಬಿಸಿಲಿಗೆ ಕಾಯುವ ನೆತ್ತಿಯೊಳಗಿನ ಕೂದಲೊಳಗೆ ಉದ್ಭವವಾಗುವ ಬೆವರು ಹಣೆಯ ಮೇಲೆ ಧಾರಾಕಾರವಾಗಿ, ಹುಬ್ಬುಗಳ ನೆನೆಸಿ ಕಣ್ಣುಗಳೊಳಕ್ಕೆ ಇಳಿದು, ತನ್ನ ಕ್ಷಾರತೆಯಿಂದಾಗಿ ಕಣ್ಣುರಿಸಿ, ಕಣ್ಣೀರ ತರಿಸಿ ಕಣ್ತುಂಬುವಂತೆ ಮಾಡಿದರೆ; ನಡೆಯುತ್ತ, ಹತ್ತುತ್ತ, ಇಳಿಯುತ್ತ, ದಾಟುತ್ತ, ಉಸಿರು ಏದುಸಿರಾಗಿ, ಮೇಲುಸಿರಾಗಿ, ದುಸುಮುಸುವಾಗಿ ಉಸಿರುಕಟ್ಟಿದಂತಾಗಿ ಎದೆಯ ಗೂಡಿನಲ್ಲಿ ಮಿಂಚಿನ ಛಳಕಿನ ನೋವೊಂದು ವ್ಯಾಪಿಸಿ, ಉಸಿರಿಗಾಗಿ ಚಡಪಡಿಸುತ್ತ ನಿಂತಾಗ ನಿಮ್ಮದೇ ಹೃದಯದ 'ಢವ ಢವ' ನಿಮ್ಮ ಕಿವಿಗಳ ತಮಟೆಯಲ್ಲಿ ಅನುರಣನಗೊಂಡರೆ; ಜೊತೆಗೇ ಹತ್ತುತ್ತ ಹತ್ತುತ್ತ ನಿಮ್ಮ ಸುತ್ತಮುತ್ತಲೂ ಮೆಲ್ಲನೇ ತನ್ನನ್ನು ತಾನೇ ಸ್ವಲ್ಪ ಸ್ವಲ್ಪವಾಗಿ ನಿಮ್ಮೆದುರು ತೆರೆದುಕೊಳ್ಳುವ ಕಾನನ, ಗುಡ್ಡ, ಹುಲ್ಲುಗಾವಲು, ಸಸ್ಯರಾಶಿ ತುಂಬಿದ ಕಣಿವೆಗಳು, ಮತ್ತೊಮ್ಮೆ ಮಗದೊಮ್ಮೆ ಉಸಿರುಗಟ್ಟಿಸಿ ನಿಮ್ಮನ್ನು ಸೌಂದರ್ಯೋಪಾಸಕರನ್ನಾಗಿ ಮಾಡುತಿದ್ದರೆ ನೀವು ಕೊಡಚಾದ್ರಿಯ ಚಾರಣಗೈಯುತ್ತಿದ್ದೀರಿ ಎಂದರ್ಥ!

ನನ್ನ ಸ್ನೇಹಿತ-ಹಳೆಯ ಸಹೋದ್ಯೋಗಿ ಸುಧೀಂದ್ರ ಹೊಸಾ ಕ್ಯಾಮೆರಾ ಕೊಂಡದ್ದೇ ಕಾರಣವಾಗಿ ಎರಡು ವಾರದಿಂದ ನನ್ನ ತಲೆ ತಿನ್ನುತ್ತಿದ್ದ-'ಗಣರಾಜ್ಯೋತ್ಸವದ ವಾರಾಂತ್ಯದ ನಾಲ್ಕುದಿನದ ರಜೆಯಲ್ಲಿ ನಮ್ಮೂರಿ(ಸಾಗರ)ಗೆ ಹೋಗೋಣ, ಕೊಡಚಾದ್ರಿಗೆ ಟ್ರೆಕ್ಕಿಂಗ್ ಹೋಗೋಣ, ಸಕ್ಕತ್ ಫೋಟೋ ತಗೀಬಹುದು(!) ಚೆನ್ನಾಗಿರುತ್ತೆ.' ಕೊನೆಗೂ ಒಪ್ಪಿ, ಸರಿಯೆಂದು ಮನೆಗೆ ಹೋಗುವ ಕಾರ್ಯಕ್ರಮವನ್ನು ಮುಂದಿನ ವಾರಾಂತ್ಯಕ್ಕೆ ಮುಂದೂಡಿ ಅವನೊಡನೆ ಹೊರಟಿದ್ದಾಯ್ತು. ಸಾಗರದಲ್ಲಿಳಿದಾಗ ಇಪ್ಪತ್ತಾರರ ಬೆಳಿಗ್ಗೆ ಏಳುಗಂಟೆ. ಇನ್ನೂ ಕಣ್ತೆರೆಯದ ಸೂರ್ಯ, ಮೈಗದಗುಟ್ಟಿಸುವ ಚಳಿ, ಮಂಜು, ಮೆಲ್ಲನೇಳುತ್ತಿರುವ ಧೂಳು, ಸಂತೆಯ ದಿನವಾದರೂ ಇನ್ನೂ ಮಲಗಿರುವ ಪಟ್ಟಣ, ಯಾವ್ಯಾವುದೋ ಯಕ್ಷಗಾನ-ಕ್ರಿಕೆಟ್-ಛಾಯಾಚಿತ್ರಸ್ಪರ್ಧೆಗಳ ಪೋಸ್ಟರ್‌ಗಳು ಮತ್ತು ಮನೆಯ ಹತ್ತಿರಕ್ಕೆ ಬಂದಾಗ ಅಂಗಳಕ್ಕೆ ನೀರು ಚೆಲ್ಲುತ್ತಿದ್ದ ಅವರಮ್ಮ ಎಲ್ಲವೂ ನನ್ನೂರನ್ನೇ ನೆನಪಿಸಿಕೊಟ್ಟವು.

ಬೆಳಿಗ್ಗೆ ಒಂದರಮೇಲೊಂದರಂತೆ ದೋಸೆಗಳನ್ನೇರಿಸಿ, ಗಂಟೆಗಂಟೆಗೊಮ್ಮೆಯಂತೆ ಕಾಫಿ ಕುಡಿದು ಬಿಸಿಲೇರುತ್ತಿದ್ದಂತೆ ಹಂಡೆಯಲ್ಲಿ ಕಾದಿದ್ದ ನೀರು ನೋಡಿ ಸ್ನಾನದ ನೆನಪುಮಾಡಿಕೊಂಡೆವು. ಆಗ ಹಲ್ಲುಜ್ಜಿ(!), ಸ್ನಾನ ಮಾಡಿಕೊಳ್ಳುತ್ತ, ಅದೂ ಇದೂ ಮಾತನಾಡುತ್ತ ಮನೆಯ ಹಿತ್ತಲಿನ ಗಿಡಗಂಟಿ-ಹೂವುಗಳ, ನಮ್ಮ ಫೋಟೋಗಳನ್ನು ತೆಗೆದುಕೊಳ್ಳುತ್ತ ಎಕ್ಸ್‌ಪೆರಿಮೆಂಟ್ ಮಾಡಲಾರಂಭಿಸಿದೆವು. ಮಧ್ಯೆ ನನ್ನನ್ನು ಕರೆದೊಯ್ದು ಸುಧಿಯ ಅಪ್ಪ ಇಕ್ಕೇರಿಯ ಅಘೋರೇಶ್ವರ ದೇವಸ್ಥಾನ, ಕೆಳದಿಯ ದೇವಸ್ಥಾನ-ಕೆರೆಗಳೆಲ್ಲವನ್ನೂ ತೋರಿಸಿಕೊಂಡು ಬಂದರು. ಮಧ್ಯಾಹ್ನ ಗಡದ್ದು ಊಟಮಾಡಿ ಅಟ್ಟವನ್ನೇರಿ ಮೂವರೂ ನಿದ್ದೆ ಹೋದೆವು. ಸಂಜೆ ಸಾಗರದ ಉದ್ದಗಲಕ್ಕೂ ದೊಡ್ಡದೊಂದು ವಾಯುವಿಹಾರ! ಮನೆಗೆ ಬಂದು, ಬೆಳಗಿನ ಚಾರಣಕ್ಕೆ ತಯ್ಯಾರಿ!

ನಾನು, ಸುಧೀಂದ್ರ, ಅವನ ತಮ್ಮ ಶರಚ್ಚಂದ್ರ, ಅವರ ತಾಯಿಯ ಕಸಿನ್ನು ಅರುಣ ಮತ್ತು ಆ ಕಸಿನ್ನಿನ ಮೂವರು ಮಿತ್ರರು – ಚೇತನ, ಪ್ರವೀಣ ಮತ್ತು ಮನೋಜ, ಒಟ್ಟು ನಾವೇಳು ಜನ ಸಾಗರದಿಂದ ಬಸ್ಸಿಗೆ ಹೊರಟು, ಶರಾವತಿ ಹಿನ್ನೀರನ್ನು ದಾಟಲು ನಮ್ಮೊಂದಿಗೆ ಬಸ್ಸನ್ನೂ ಬಾರ್ಜಿನ ಮೇಲೇರಿಸಿಕೊಂಡು, ಈ ದಡಕ್ಕಿಳಿದು, ಮತ್ತದೇ ಬಸ್ಸು ಹತ್ತಿ ಕೊಡಚಾದ್ರಿ ಚಾರಣದ ಆರಂಭ ಸ್ಥಾನ – ಕಾರೇಕ್ರಾಸ್‌ಗೆ ಬಂದಿಳಿದಾಗ ಸರಿಯಾಗಿ ಜನವರಿ ಇಪ್ಪತ್ತೇಳರ ಮುಂಜಾನೆಯ ಹತ್ತೂ ಮುಕ್ಕಾಲು ಗಂಟೆ. ಬ್ಯಾಗುಗಳನೆಲ್ಲ ಬೆನ್ನಿಗೇರಿಸಿ, ನಗುತ್ತ, ಮಾತನಾಡುತ್ತ, ಅಟ್ಟಹಾಸಗೈಯುತ್ತ, ನಗೆಚಟಾಕಿ ಹಾರಿಸುತ್ತ, ಅವರಿವರ ಕಾಲೆಳೆಯುತ್ತ, ಬೈಸಿಕೊಳ್ಳುತ್ತ, ನಡೆಯುತ್ತ ಟಾರು ರಸ್ತೆಯಿಂದ ಕೊಡಚಾದ್ರಿಯ ಕೆಳಭಾಗಕ್ಕೆ ಬಂದು, ಅಲ್ಲಿದ್ದ ಕಾಕಾಹೋಟೆಲಿನಲ್ಲಿ ಮೂರು ರೂಪಾಯಿಗೊಂದು ಬಾಳೇಹಣ್ಣು ತಿಂದು, ಸುಧಾರಿಸಿಕೊಂಡು ಚಾರಣ ಶುರುಮಾಡಿದಾಗ ಬೆಳಗು ಮದ್ಯಾಹ್ನದೆಡೆಗೆ ಹೊರಳುತ್ತಿತ್ತು.

ಏರುಹಾದಿ, ಗಿಡಗಂಟಿಗಳ ಬೇರುಗಳು, ಮುರಿದು ಬಿದ್ದು ಒಣಗಿಹೋದ ಮರಗಳು, ಕಣಿವೆಗಳ ಮಧ್ಯೆ ದಟ್ಟವಾದ ಕಾನನ, ಚಳಿಗಾಲವಾದುದರಿಂದ ಒಣಗಿದ್ದ ಹುಲ್ಲುಗಾವಲು, ರಾತ್ರಿಯ ಚಳಿಗೆ ಹೆದರಿ ಎಲ್ಲರ ಬ್ಯಾಗಿನಲ್ಲೂ ಎರಡೆರಡು ಹೊದಿಕೆಗಳು, ಜೊತೆಗೇ ಚಪಾತಿ, ಇಡ್ಲಿ, ಕುಟ್ಟವಲಕ್ಕಿ, ರವೆವುಂಡೆ, ಕೋಡುಬಳೆ, ಚಾಕೊಲೇಟ್‌ಗಳು, ನೀರಿನ ಬಾಟಲಿಗಳು, ಸ್ವೆಟರ್ರು, ಟೋಪಿ, ಜರ್ಕಿನ್ನು. ಇಡೀ ಸಂಸಾರವೇ ಗುಳೇ ಹೊರಟಂತೆ ಹೊರಟು, ಮೊದಲೇ ಹೇಳಿದಂತೆ ಏದುಸಿರು ಬಿಡುತ್ತ, ನಡು ನಡುವೆ ಸುಧಾರಿಸಿಕೊಳ್ಳುತ್ತ, ಅತ್ತಿತ್ತ ನೋಡುತ್ತ, ಪ್ರಕೃತಿಯ ಅಗಾಧತೆಗೆ ಬೆರಗಾಗುತ್ತ, ಅದರ ವಿಚಿತ್ರ-ವಿಶಿಷ್ಟ ಶಬ್ದಗಳನ್ನಾಲಿಸುತ್ತ ಗಮ್ಯವನ್ನು ಕಣ್ಣಿನೊಳಗಿಟ್ಟುಕೊಂಡು ಹತ್ತಿ ಕೊಡಚಾದ್ರಿಯ ತುದಿಯಲ್ಲಿರುವ ಫಾರೆಸ್ಟ್ ಗೆಸ್ಟ್‌ಹೌಸ್ ತಲುಪಿದಾಗ ಮಟಮಟ ಮಧ್ಯಾಹ್ನದ ಎರಡೂವರೆ ಗಂಟೆ. ಹಸಿದು, ಬಸವಳಿದು ಬೆಂಡಾಗಿ ಊಟಕ್ಕೆ ಕುಳಿತರೆ ಯಾರಿಗೂ

ಮಾತೇ ಇಲ್ಲ! ಊಟ ಮುಗಿದು ಸ್ವಲ್ಪ ಚೈತನ್ಯಸಂಚಾರವಾದ ಮೇಲೆ ನಾಲ್ಕೂವರೆಯ ತನಕ ಮಾತು, ನಗು, ಗೇಲಿ, ಸ್ಥಳದ ಪರಿಶೀಲನೆ–ತಪಾಸಣೆ, ಅಲ್ಲಿದ್ದ ನಾಗತೀರ್ಥದ ಕೊಳದಲ್ಲಿ ಕಾಲುಗಳಿಗೆ ತಣ್ಣೀರ ತಂಪು.

ಐದು ಗಂಟೆಗೆ ಅಲ್ಲಿಗಿಂತಲೂ ಎತ್ತರದಲ್ಲಿದ್ದ 'ಸನ್‌ಸೆಟ್ ಪಾಯಿಂಟ್'ಗೆ ಚಾರಣ. ಅದು ಸರ್ವಜ್ಞ ಪೀಠವೂ, ಶಂಕರಾಚಾರ್ಯರು ತಪಸ್ಸುಗೈದಿದ್ದ ಸ್ಥಳವೂ ಹೌದು. ಎರೆಡೆರಡು ಗುಂಪಾಗಿ, ಎರೆಡೆರೆಡು ದಾರಿಗಳನ್ನು ಎಕ್ಸ್‌ಪ್ಲೋರ್ ಮಾಡ ಹೊರಟೆವು. ನಾನೂ, ಅರುಣ ಮತ್ತು ಸುಧೀ ನಾವು ಹಿಡಿದಿದ್ದ ದಾರಿಯನ್ನೂ ಬಿಟ್ಟು ಕಾಡು ಹೊಕ್ಕೆವು. ದಿಕ್ಕನ್ನು ಮಾತ್ರ ತಲೆಯ ದಿಕ್ಸೂಚಿಯಲ್ಲಿಟ್ಟುಕೊಂಡು, ಏರುಗಳನ್ನು ಹತ್ತುತ್ತ, ಮರಗಿಡ–ಗಂಟಿಗಳೊಳಗೆ ನುಸುಳುತ್ತ ಮೇಲೇರುವ ಸಾಹಸ ಮಾಡಿದೆವು. ಅಲ್ಲೆಲ್ಲೋ ಒಂದುಕಡೆ ತೀರಾ ಹಳೆಯವಲ್ಲದ ಎರಡು ದೊಡ್ಡ ಅಲ್ಯುಮಿನಿಯಮ್ ಪಾತ್ರೆಗಳೂ ಎರಡು ಲೀಟರ್ ಬಾಟಲಿನ ತುಂಬಾ ಮಜ್ಜಿಗೆಯಂತಾ ಬಿಳೀದ್ರವವೂ ಸಿಕ್ಕವು. ಎದೆಯಲ್ಲಿ ಸಣ್ಣಗೆ ಹೆದರಿಕೆಯಾದರೂ 'ನೋಡೋ ಯಾರೋ ನಕ್ಸಲೈಟ್ಸ್ ಬಿಟ್ಟು ಹೋಗಿದಾರೆ' ಅಂತೆಲ್ಲ ಮಾತನಾಡುತ್ತ ನಗಾಡಿಕೊಂಡು, ಕೊನೆಗೂ ಅದೆಲ್ಲ ಸಸ್ಯರಾಶಿಯನ್ನು ಹಿಂದೆಹಾಕಿ ಪೀಠ ತಲುಪಿದೆವು. ಉಳಿದೆಲ್ಲರೂ ನಮಗಿಂತ ಮೊದಲೇ ಅಲ್ಲಿಗೆ ತಲುಪಿಕೊಂಡಿದ್ದರು.

ಜೀವನದ ಅನಿಶ್ಚಿತತೆ ಮತ್ತು ಸೃಷ್ಟಿಯ ಅಗಾಧತೆಯನ್ನು ನೀವು ಸವಿಯಬೇಕಿದ್ದರೆ ನೀವು ಪ್ರಕೃತಿಯ ಮಡಿಲ ಸೇರಬೇಕು. ಅದು ಭೋರನೆ ಹರಿಯುವ ನದಿಯಾಗಿರಬಹುದು, ಅಬ್ಬರಿಸುವ ಸಮುದ್ರವೇ ಆಗಿರಬಹುದು, ಕಾದ ಕಾವಲಿಯಂತೆ ಕೆಂಪಗೆ ಸುಟ್ಟು ಮಿರಮಿರ ಮಿರುಗುವ ಮರುಭೂಮಿ ಅಥವಾ ಕಣ್ಣು ಹಾಯಿಸಿದ್ದುದ್ದಕ್ಕೂ ಹರಡಿಕೊಂಡ ಹಿಮವತ್ಪರ್ವತವಾದರೂ ಸರಿ, ಕಂಡ ಕೂಡಲೇ ನಿಮಗೆ ನಿಮ್ಮ ಅಸ್ತಿತ್ವದ ಅಸ್ಥಿರತೆಯನ್ನೂ, ಪ್ರಕೃತಿಯ ನಿರಂತರತೆಯನ್ನೂ ತೋರಿಸಿಕೊಡುತ್ತವೆ. ಪ್ರಕೃತಿಯನ್ನು ಅರಿಯದೇ ಅದರ ಮಡಿಲಿನೊಳಗಿದ್ದೂ, ಬೆಳೆದೂ, ಬೆಳೆಯುತ್ತಲೂ ಅವಳ ಹಂಗೇ ಬೇಡವೆಂಬಂತೆ ಬದುಕುವ, ಬದುಕ ಮುಗಿಸುವ ನಮ್ಮಂತ ಸ್ವಯಂ–ಈಶ್ವರರಿಗೆ ನಶ್ವರತೆಯ ಪಾಠ ಕಲಿಸಿಕೊಡುತ್ತದೆ.

ಕಣ್ಣುಚಾಚಿದಷ್ಟು ದೂರದವರೆಗೆ ಹರಡಿಕೊಂಡಿದ್ದ ಊರುಗಳು, ಕಾಡುಗಳು, ನದಿ, ಸರೋವರಗಳು, ದಿಗಂತದ ಕೊನೆಯ ಅಂಚು ಗೊತ್ತಾಗದಂತೆ ಹರಡಿಕೊಂಡಿದ್ದ ಸಂಜೆಯ ಬಿಸಿಲು–ಮಂಜು. ಶಿಖರದ ತುದಿಯಿಂದ ನೋಡಿದರೆ ಹೃದಯದ ಬಡಿತವನ್ನು ನಾಗಾಲೋಟಕ್ಕೇರಿಸಿ, ತಲೆ ಸುತ್ತು ಬರಿಸುವಂತಹ ಪ್ರಪಾತ, ಅಲ್ಲೇ ತಿರುಗಿಕೊಂಡಿರುವ ಕಣಿವೆ, ಕಣಿವೆಯ ಶುರುವಿನಲ್ಲಿರುವ ಒಣಗಿ ಚಿನ್ನದ ಬಣ್ಣಕ್ಕೆ ತಿರುಗಿರುವ ಹುಲ್ಲುಗಾವಲು, ಅದರ ನಟ್ಟ ನಡುವೆ ಒಂದು ಮರ, ಮರದಿಂದ ಹೊರಬಂದು ನಮ್ಮನ್ನು ಈಕ್ಷಿಸಿ ಮತ್ತೆ ಅತ್ತಿತ್ತ ತೊನೆದಾಡುತ್ತ ಕ್ಯಾಮೆರಾ ಕಣ್ಣಿಗೆ ಸಿಕ್ಕದೇ ಲಗಾಟಿಹೊಡೆದು, ಅತ್ತ ಹಾರಿ, ಇತ್ತ ಏರಿ, ಏರ್‌ಶೋ ಕೊಡುತ್ತಿದ್ದ ಮೈನಾಗಳು... ಎಲ್ಲರೂ ಮೌನವೇ ಮೆಚ್ಚುಗೆಯಾಗಿ ನೋಡಿದರು. ನಂತರ ಅದೆಲ್ಲ ಸಂತೋಷವನ್ನು ಹಂಚಿಕೊಂಡು, ಬರದಿದ್ದ ಸ್ನೇಹಿತ–ಸ್ನೇಹಿತೆಯರಿಗೆ ಹೊಟ್ಟೆಕಿಚ್ಚು ತರಿಸಲು ಮೊಬೈಲ್ ಕರೆಗಳನ್ನೂ–ಎಸ್ಸೆಮೆಸ್‌ಗಳನ್ನೂ ಮಾಡಲಾರಂಭಿಸಿದರು. ನಾನೂ ಅದನ್ನೇ ಮಾಡಿದೆ. ಕ್ಷಣ ಕಳೆದಂತೆಲ್ಲ ಮೋಡಗಳ ನಡುವೆ ಸೂರ್ಯನ ಪ್ರಯಾಣ ಬಿಸಿಲುಕೋಲುಗಳ ಹೊಸ–ಹೊಸ ಚಿತ್ತಾರಗಳನ್ನು ಬರೆಯುತ್ತಿತ್ತು. ನಾನು ಪ್ರಪಾತದಂಚಿಗೆ ಕಾಲುಹಾಕಿಕೊಂಡು ಗಟ್ಟಿಯಾಗಿ ಕುಳಿತೆ. ಎದೆ ಢವಢವವೆಂದರೂ 'ನಮ್ಮ ಭಯವನ್ನು ಗೆಲ್ಲಲು ಅದನ್ನು ಎದುರಿಸುವುದೇ ಸರಿಯಾದ ಮಾರ್ಗ' ಎಂದುಕೊಂಡು ತಳಕಾಣದ ಕಣಿವೆಯನ್ನು ನೋಡುತ್ತ ಕುಳಿತೆ, ಸೂರ್ಯಾಸ್ತವಾಗತೊಡಗಿತು.

ಅದುವರೆಗೂ ಕಾಣದೇ ಇದ್ದ ಮಂಜು ತೆರೆತೆರೆಯಾಗಿ ಭೂಮಟ್ಟದಿಂದ ಎಲ್ಲವನ್ನು ಮುಚ್ಚಿಕೊಳ್ಳುತ್ತ ಬಂತು. ಊರು, ನದಿ, ಬಯಲು, ಆಲಯ ಎಲ್ಲವೂ ಕೆಂಬಣ್ಣದ ಮಂಜಿನಲ್ಲಿ ಮುಚ್ಚಿಹೋದವು. ಸೂರ್ಯನೂ ಬೆಳ್ಳಿಬಣ್ಣದಿಂದ ಚಿನ್ನವಾಗಿ, ಕಾದು ಕೆಂಪಗಾಗಿ, ಕೊನೆಗೊಮ್ಮೆ ನಮಗೊಂದು ವಿದಾಯವನ್ನೂ ಹೇಳದೇ ಮಂಜಿನ ಕಡಲಲ್ಲಿ ಮುಳುಗಿದ. ನಮಗೆ ಕಡೆಗೂ ದಿಗಂತದಂಚನ್ನು ನೋಡಲು ಆಗಲೇ ಇಲ್ಲ. ಅವನು ಹೋದ ತಕ್ಷಣವೇ ಮಂಜು ತನ್ನ ಬಣ್ಣ ಕಳೆದುಕೊಂಡಿತು, ಅದುವರೆಗೂ ಕಾನನದಲ್ಲೆಲ್ಲೋ ಅಡಗಿಕೊಂಡಿದ್ದ ಕುಳಿರ್ಗಾಳಿ ಇಬ್ಬನಿಯನ್ನೂ ತನ್ನೊಡನೆ ತಂದು ನಮ್ಮೆಲ್ಲರನ್ನು ಗದಗುಟ್ಟಿಸುತ್ತ ಜೋರಾದ ಹೋರಿನಿಂದ ಬೀಸತೊಡಗಿತು. ಮಂಕು–ಮಂಕಾದ ಬೆಳಕಿನಲ್ಲೇ ನಮ್ಮೆಲ್ಲ ದೇಹಗಳನ್ನು ಚಳಿಗೆ ಮುದ್ದೆಮಾಡಿಕೊಂಡು, ಅಲ್ಲಿನ ದೇವಸ್ಥಾನದ ಭಟ್ಟರ ಮನೆಯಲ್ಲಿ ಹೇಳಿಟ್ಟಿದ್ದ ರಾತ್ರಿಯ ಊಟ, ಮೊದಲೇ ಪ್ಲಾನು ಮಾಡಿದ್ದ ಕ್ಯಾಂಪ್‌ಫೈರನ್ನೂ ನೆನಪಿಸಿಕೊಂಡು, ಗಡಗಡನಡುಗುತ್ತ, ನಮ್ಮೊಡನೆ ವಾಪಸ್ಸು ಬರಲೊಪ್ಪದೇ ಹಟಮಾಡುತ್ತಿದ್ದ ಮನಸ್ಸನ್ನೂ ಎಳೆದುಕೊಂಡು ಕೊಡಚಾದ್ರಿಯ ನಮ್ಮ ಬೇಸ್ ಕ್ಯಾಂಪಿಗೆ ಇಳಿದೆವು, ನಾಳೆ ಇದನ್ನೆಲ್ಲ ಬಿಟ್ಟು ಹೋಗಬೇಕಲ್ಲಾ ಎಂದು ಕರುಬಿಕೊಂಡು.